40 ಲಕ್ಷದ 70 ಸಾವಿರ ರೂಪಾಯಿಗಳ ಬಾಕಿ ಇದೆ 5 ಸಂಘಗಳು ಲೈಸೆನ್ಸ್ ನವೀಕರಣ ಮಾಡಿಕೊಂಡಿವೆ 2 ಸಂಘಗಳು ಮರು ಪಾವತಿ ಮಾಡಿವೆ 29 ಸಂಘಗಳು ಮರುಪಾವತಿ ಮಾಡಬೇಕಾಗುತ್ತದ ಇದರಲ್ಲಿ ಕಿರುಕುಳ ಕೊಡುವ ಪ್ರಶ್ನೆ ಒರುವುದಿಲ್ಲ ಯಾರು ಬಾಕಿದಾರರಾಗಿದ್ದಾರೆ, ಅವರ ಲೈಸೆನ್ಸ್ ನವೀಕರಣ ಮಾಡುವ ವಿದ್ಧತಿ ನಮ್ಮ ಇಲಾಖೆಯಲ್ಲಿಲ್ಲ ಆದರೂ ಕೂಡ ಇಲಾಖೆಯಿಂದ ಯಾವುದೇ ರೀತಿಯಲ್ಲಿ ತೊಂದರೆಯಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಮ್ಮ ಸರ್ಕಾರ ವಹಿಸಿಕೊಳ್ಳುತ್ತದೆ ಇದರಲ್ಲಿ ಸಂಪೂರ್ಣವಾದ ಪರಿಹಾರವನ್ನು ಯಾವ ರೀತಿ ಕೊಡಬಹುದೆಂದು ಹೇಳಿ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ಹೇಳಲು ಇಚ್ಛಿಸುತ್ತೇನೆ

ಶ್ರೀ ಡಿ ವಿ ಸದಾನಂದಗೌಡ ನೀರಾ ಇಳಿಸಲು ಅನುಮತಿ ಕೊಟ್ಟಿದ್ದಾರೆ ಲೀಟರ್ ಫೀ ಮನ್ನಾ ಮಾಡಿಲ್ಲ

(ಗೊಂದಲ)

ಒಂದೇ ರಿಜಿಸ್ಟ್ರೇಷನ್‌ನಲ್ಲಿ ಹೆಚ್ಚು ಬಸ್ಸು ಓಡಿಸುತ್ತಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 10(486)

ಸದಸ್ಯರ ಹೆಸರು ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ (ಕೋಲಾರ)

ಉತ್ತರಿಸುವ ಸಚಿವರು ಶ್ರೀ ಸಿ.ಆರ್ ಸಗೀರ್ ಅಹಮದ್ (ಸಾರಿಗೆ ಸಚಿವರು)

ಪ್ರಶ್ನೆ

ಅ) ಒಂದೇ ರಿಜಿಸ್ಟ್ರೇಷನ್ ಅಡಿಯಲ್ಲಿ ಒಂದಕ್ಕಿಂತ ಹೆಚ್ಚಿಗೆ ಬಸ್ಸುಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅಂತಹ ಯಾವ ಯಾವ ಬಸ್ಸುಗಳ ಮಾಲೀಕರ ವಿರುದ್ಧ ಎಷ್ಟು ಕೇಸುಗಳನ್ನು ದಾಖಲು ಮಾಡಿಕೊಳ್ಳಲಾಗಿದೆ?

ಉತ್ತರ

ಅ) ಬಂದಿದೆ

ಆ) ರಾಜ್ಯದಲ್ಲಿ ಇಂತಹ ಕೆಳಗಿನ ಮೂರು ಪ್ರಕರಣಗಳು ಬೆಳಕಿಗೆ ಬಂದಿದ್ದು ಇವುಗಳ ವಿರುದ್ಧ ಆರಕ್ಷಕ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ

1) ನ್ಯಾಷನಲ್ ಟ್ರಾವಲ್ಸ್, ಬೆಂಗಳೂರು

2) ಮಾಸ್ಟರ್ ಟ್ರಾವಲ್ಸ್, ಬೆಂಗಳೂರು

3) ಶ್ರೀ ನಾರಾಯಣಪ್ಪ
ಸನ್ ಆಫ್ ಕೃಷ್ಣಪ್ಪ
2 3ನೇ ಮುಖ್ಯ ರಸ್ತೆ
ಹನುಮಂತನಗರ, ಬೆಂಗಳೂರು

11 10 ಎಎಂ

ಶ್ರೀ ಶ್ರೀನಿವಾಸ ಕುದುವನಹಳ್ಳಿ ಕೆ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ 1) ನ್ಯಾಷನಲ್ ಟ್ರಾವಲ್ಸ್ 2) ಮಾಸ್ಟರ್ ಟ್ರಾವೆಲ್ಸ್ 3) ಶ್ರೀ ನಾರಾಯಣಪ್ಪ ಎಂಬುದಾಗಿ ಒಟ್ಟು ಮೂರು ಕಂಪನಿಗಳ ಹೆಸರುಗಳನ್ನು ತಿಳಿಸಿರುತ್ತಾರೆ ಇವರು ಎಷ್ಟು ವರ್ಷಗಳಿಂದ ಓಡಿಸುತ್ತಿದ್ದರು? ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಬಸ್ಸಿನ ಮಾಲೀಕರು ಆಗಿರುವುದರಿಂದ ತಮಗೂ ಕೂಡ ಗೊತ್ತಿದೆ ಒಂದೇ ರಿಜಿಸ್ಟ್ರೇಷನ್ ಅಡಿಯಲ್ಲಿ ಒಂದಕ್ಕಿಂತ ಹೆಚ್ಚಿಗೆ ಬಸ್ಸುಗಳನ್ನು ಓಡಿಸುತ್ತಿದ್ದಾರೆ, ಆದರೆ ಇಂಜಿನ್ ನಂಬರ್ ಬೇರೆ ಬೇರೆ ಇರುತ್ತದೆ, ಆ ವೆಹಿಕಲ್ಸ್‌ನ್ನು ರಿಜಿಸ್ಟ್ರೇಷನ್ ಮಾಡಿಕೊಂಡ ದಿನಾಂಕದಿಂದ ತೆರಿಗೆಯನ್ನು ವಸೂಲು ಮಾಡಬೇಕಾಗುತ್ತದೆ ಆದರೆ, ಮಾನ್ಯ ಸಚಿವರು ಕೊಟ್ಟ ಉತ್ತರದಲ್ಲಿ ''ಇವುಗಳ ವಿರುದ್ಧ ಆರಕ್ಷಕ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಕಾನೂನಿನ ಕ್ರಮ ಜರುಗಿಸಲಾಗುತ್ತಿದೆ'' ಎಂದು ಹೇಳಿರುವುದನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತಿದೆ ಏಕೆಂದರೆ, ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಸೋರಿ ಹೋಗುತ್ತಿದ್ದರೂ ಸರ್ಕಾರ ಇದನ್ನು ಇಷ್ಟು ಲಘುವಾಗಿ ಪರಿಗಣಿಸಿದೆ ಎಂದು ನಾನಾದರೂ ಭಾವಿಸುತ್ತೇನೆ ಏಕೆಂದರೆ, ರಿಜಿಸ್ಟ್ರೇಷನ್ ಯಾವಾಗ ಆಗಿದೆ ಎಂಬುದನ್ನು ಹೇಳಿದರೆ ಆ ವೆಹಿಕಲ್ ಇಂಜಿನ್ ನಂಬರ್ ಇಪೆಲ್ಲವೂ ಗೊತ್ತಾಗುತ್ತದೆ ಆದರಲ್ಲೂ ಒಂದು ಕ್ವಾರ್ಟರ್ಲಿಗೆ ಒಂದು ಸೀಟಿಗೆ 475 ರೂಪಾಯಿ ಕೊಡುತ್ತಾರೆ ಅಂದರೆ ಒಂದು ಬಸ್ಸಿಗೆ ಒಂದು ವರ್ಷಕ್ಕೆ ಸುಮಾರು 95 ಸಾವಿರ ರೂಪಾಯಿ ಟ್ಯಾಕ್ಸ್ ಕೊಡಬೇಕಾಗುತ್ತದೆ ಹೀಗಾಗಿ ಇದನ್ನು ನೀವು ಹೀಗೆ ಬಿಟ್ಟುಕೊಂಡು ಹೋದರೆ ಸಾರ್ವಜನಿಕರೂ ಕೂಡ ದುಡ್ಡು ಪ್ರಿಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ ಆದ್ದರಿಂದ, ಇದರ ಬಗ್ಗೆ ಇವರ ಮೇಲೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ ಎಂಬುದನ್ನು

ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ

ಶ್ರೀ ಸಿ ಆರ್ ಸಗೀರ್ ಅಹಮದ್ ಮಾನ್ಯ ಅಧ್ಯಕ್ಷರೆ, ಈ ಪ್ರಕರಣ ನನ್ನ ಗಮನಕ್ಕೆ ಬಂದ ತಕ್ಷಣ ಇದನ್ನು ಪೊಲೀಸ್ ಇಲಾಖೆಗೆ ವರ್ಗಾಯಿಸಲಾಗಿದೆ ಮಾಡಿರುವಂಥದ್ದು ಮಹಾ ಅಪರಾಧವೆಂದು ನನ್ನ ಗಮನಕ್ಕೆ ಬಂದಿದೆ ಸರ್ಕಾರಕ್ಕೆ ಬರಬೇಕಾದ ತೆರಿಗೆ, ಯಾವತ್ತು ಈ ವಾಹನವನ್ನು ನೋಂದಾಯಿಸಲ್ಪಟ್ಟಿದೆ ಅವತ್ತಿನಿಂದ ಈವತ್ತಿನವರೆಗೆ ಪ್ರತಿ ವಾಹನಕ್ಕೆ 10 19 592-00 ರೂಪಾಯಿಗಳಿಗೆ ನಾವು ನೋಟೀಸ್ ನೀಡಿದ್ದೇವೆ ಮೂರು ವಾಹನಗಳು ಸೇರಿ ನಮಗೆ ಬರಬೇಕಾದ ಮೊತ್ತವಾದ 30,49,000-00 ರೂಪಾಯಿಗಳಿಗೆ ಈಗಾಗಲೇ ಅವರಿಗೆ ನೋಟೀಸ್ ಕೊಟ್ಟಿದ್ದೇವೆ ಮೂರು ವಾಹನಗಳು ಪೊಲೀಸ್ ಸ್ವಾಧೀನದಲ್ಲಿವೆ ಒಂದು ಪ್ರಕರಣದಲ್ಲಿ ಒಬ್ಬ ಮಾಲೀಕ ಹೈ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾನೆ ಆದಾಗ್ಯೂ ನಾವು ವಾಹನವನ್ನು ನಮ್ಮ ವಶದಿಂದ ಬಿಡುಗಡೆಗೊಳಿಸಿಲ್ಲ ಆದುದರಿಂದ, ಸರ್ಕಾರಕ್ಕಾಗಲಿ ಇಲಾಖೆಗಾಗಲಿ ಈ ನಡೆದಿರುವಂಥ ಪ್ರಕರಣಗಳಿಂದ ಯಾವುದೇ ತರಹದ ನಷ್ಟವಾಗಿಲ್ಲ ಅವರಿಂದ ತೆರಿಗೆ ವಸೂಲು ಮಾಡುವಂಥ ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ

ಶ್ರೀ ಶ್ರೀನಿವಾಸಗೌಡ ಕುದುರನಹಳ್ಳಿ ಕೆ ಒಂದೇ ರಿಜಿಸ್ಟ್ರೇಷನ್ ಅಡಿಯಲ್ಲಿ ಒಂದಕ್ಕಿಂತ ಹೆಚ್ಚು ಬಸ್ಸುಗಳನ್ನು ಓಡಿಸಿದರೂ ನಷ್ಟವಾಗಿಲ್ಲ ಎಂದು ಹೇಳಿದರೆ ಸರ್ಕಾರ ಇದರ ಬಗ್ಗೆ ಯಾವ ರೀತಿ ಗಮನ ಹರಿಸಿದೆಯೋ ನನಗೆ ಗೊತ್ತಿಲ್ಲ ಒಂದೇ ಬಸ್ ನಂಬರ್‌ನಲ್ಲಿ ಅದೇ ನಂಬರಿನ ಇತರೆ ಬಸ್‌ಗಳು ಬಾಂಬೆ, ಮದ್ರಾಸ್, ಕೊಚ್ಚಿನ್, ಹೈದರಾಬಾದ್, ಹೀಗೆ ಬೇರೆ ಬೇರೆ ಕಡೆ ಸಂಚರಿಸಿದರೂ ಸರ್ಕಾರಕ್ಕೆ ನಷ್ಟವಾಗಿಲ್ಲವೆಂದರೆ ಹೇಗೆ? ಇದನ್ನು ಯಾವ ಆಧಾರದ ಮೇಲೆ ಅಳತೆ ಮಾಡಿದ್ದಾರೋ ನನಗೆ ಗೊತ್ತಿಲ್ಲ ಮಾನ್ಯ ಮಂತ್ರಿಗಳು ನಷ್ಟವಾಗಿಲ್ಲ ಎಂದು ಹೇಳಿದರೆ ನಿಜವಾಗಿ ನಾನು ಬಹಳ ನೊಂದು ಈ ಮಾತನ್ನು ಹೇಳಬೇಕಾಗುತ್ತದೆ

ಶ್ರೀ ಸಿ ಆರ್ ಸಗೀರ್ ಅಹಮದ್ ನಮ್ಮ ತಪಾಸಣೆ ನಡೆದಂಥ ಸಂದರ್ಭದಲ್ಲಿ ಈ ವಾಹನಗಳು ಸಿಕ್ಕಿ ಹಾಕಿಕೊಂಡಿವೆ ನಮಗೆ ಬರುವ ತೆರಿಗೆ ಲುಕ್ಸಾನು ಆಗದ ರೀತಿಯಲ್ಲಿ ಲೆಕ್ಕಾಚಾರ ಹಾಕಿ ಮಾನ್ಯ ಸದಸ್ಯರು ಹೇಳಿದ ಹಾಗೆ ವಾಹನ ನೋಂದಾವಣೆ ಆದ ದಿನಾಂಕದಿಂದ ನಾವು ಮೊಕದ್ದಮೆ ಹೂಡಿರುವವರೆಗೆ ಸರ್ಕಾರಕ್ಕೆ ಬರಬೇಕಾದ ತೆರಿಗೆ ಎಷ್ಟು ಇದೆ ಎಂಬುದನ್ನು ಹೇಳಿದ್ದೇನೆ ಮತ್ತು ಇದರ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟಿದ್ದೇವೆ ಮೊಕದ್ದಮೆ ಹೂಡಿದ ಮೇಲೆ ಸರ್ಕಾರಕ್ಕೆ ಬರುವ ತೆರಿಗೆಯ ಬಗ್ಗೆ ನಾವು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ ಈ ಮೊಕದ್ದಮೆಗಳಿಗೆ ಈಡಾಗಿರುವಂಥ ಮೂರು ವಾಹನಗಳಿಂದ ಏನು ನಷ್ಟವಾಗುತ್ತಿತ್ತೋ ಅದನ್ನೇ ನಾವು ತಪಾಸಣೆಯಿಂದ ತಡೆ ಹಿಡಿದಿದ್ದೇವೆ ಆದುದರಿಂದಲೇ ನಾನು ಈ ವಾಹನಗಳಿಂದ

ಸರ್ಕಾರಕ್ಕೆ ನಷ್ಟವಾಗಿಲ್ಲವೆಂದು ಹೇಳಿದೆ

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ ನ್ಯಾಷನಲ್ ಟ್ರಾವೆಲ್ಸ್ ಹಾಗೂ ಮಾಸ್ಟರ್ ಟ್ರಾವೆಲ್ಸ್‌ರವರು ಒಬ್ಬೊಬ್ಬರು ಸುಮಾರು 20-30 ಬಸ್ಸುಗಳನ್ನು ಇಟ್ಟುಕೊಂಡಿದ್ದಾರೆ ಈ ರೀತಿ ದೊಡ್ಡ ಕಂಪನಿಯವರೇ ಈ ರೀತಿ ಅವ್ಯವಹಾರ ನಡೆಸಿರುವುದರಿಂದ ಎಲ್ಲಾ ಬಸ್ಸುಗಳನ್ನು ಸೀಜ್ ಮಾಡಿ ಏಕೆಂದರೆ ಆ ವಾಹನಗಳ ಓನರ್ ಒಬ್ಬನೇ ಆಗಿರುವುದರಿಂದ ಕೇವಲ ಆ ಮೂರು ವಾಹನಗಳನ್ನು ಸೀಜ್ ಮಾಡುವ ಬದಲು ಅವರ ಎಲ್ಲಾ ವಾಹನಗಳನ್ನು ಸೀಜ್ ಮಾಡಿ ಪೊಲೀಸ್‌ಗೆ ಕೊಡಿ ಆಗ ಅವರು ಯಾವ ಕೋರ್ಟಿಗೆ ಹೋಗುತ್ತಾರೆ ನೋಡೋಣ ಹೀಗೆ ಮಾಡದೆ ಅವರ ಒಂದು ಬಸ್ಸನ್ನು ಸೀಜ್ ಮಾಡಿದರೆ ಹೇಗೆ? ಅವರು 20-30 ಬಸ್ಸಿನ ಮಾಲೀಕರು ಆಗಿರುವುದರಿಂದ, ನೀವು ಒಂದೇ ಬಸ್ಸಿನ ಮೇಲೆ ದಂಡ ಹಾಕಿದರೆ ಉಳಿದ ಬಸ್‌ಗಳಲ್ಲಿ ಅವರು ಇದನ್ನೇ ಮಾಡಿದರೆ ನೀವು ಏನು ಮಾಡುತ್ತೀರಿ? ಆದುದರಿಂದ, ತಾವು ದಯಮಾಡಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರುತ್ತೇನೆ

ಶ್ರೀ ಸಿ ಗುರುಸ್ವಾಮಿ ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ

ಅಧ್ಯಕ್ಷರು ನೀವು ಹೀಗೆ ಮಾಡಿದರೆ ನಿಮ್ಮ ಸ್ನೇಹಿತರ ಐದು ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ I am going to close exactly after one hour I am very sorry

ಶ್ರೀ ಸಿ ಆರ್ ಸಗೀರ್ ಅಹಮದ್ ಗುಪ್ತದಳದವರನ್ನು ಬಿಟ್ಟು ಈ ಪ್ರಕರಣ ಬೆಳಕಿಗೆ ಬಂದ ನಂತರ ದಿನನಿತ್ಯ ನಾವು ತಪಾಸಣೆ ನಡೆಸುತ್ತಿದ್ದೇವೆ ಈ ರೀತಿಯಾಗಿ ಸರ್ಕಾರಕ್ಕೆ ಯಾರಾದರೂ ವಂಚನೆ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ನಾವು ಕಟ್ಟುನಿಟ್ಟಿನ ಕ್ರಮ ಜರುಗಿಸುತ್ತೇವೆ

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ ಬಸ್ಸುಗಳು ಒಬ್ಬರ ಹಸರಿನಲ್ಲಿರುವುದರಿಂದ ಎಲ್ಲವನೂ ಸೀಜ್ ಮಾಡಿ

ಹುಲಸೂರು ಮತ ಕ್ಷೇತ್ರ ಮೆಹಕರ್ ಗ್ರಾಮದಲ್ಲಿ ಪೋಲೀಸ್ ಔಟ್‌ಪೋಸ್ಟ್ ಸ್ಥಾಪಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 12(315)

ಸದಸ್ಯರ ಹೆಸರು ಶ್ರೀ ರಾಜೇಂದ್ರವರ್ಮ (ಹುಲ್‌ಸೂರ್)